ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಕ್ರಮ ಸಂಖ್ಯೆ 1ರ ಉತ್ತರದನ್ವಯ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಸಮಾಜ ಕಲ್ಯಾಣ ಇಲಾಖೆ

ಮಂಗಳೂರು ನಗರದ ಊರ್ವವೇಲ್ಸ್‌ನ ಬೋಳಾರ್ ಎಂಬಲ್ಲಿ ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡವನ್ನು ಮಂಗಳೂರು ಮಹಾನಗರ ಪಾಲಿಕೆಯ ಶೆ. 18 ರ ಹಣದಲ್ಲಿ ಕಟ್ಟಲ್ಪಟ್ಟು, ಕಟ್ಟಡ ಕಾಮಗಾರಿ ನಿರ್ಮಾಣ ಪ್ರಗತಿಯಲ್ಲಿರುವಾಗಲೇ ಕಟ್ಟಡ ಶಿಥಿಲ ಅವಸ್ಥೆಗೊಂಡಿರುವ ಬಗ್ಗೆ ಲೋಕಾಯುಕ್ತರವರು ತನಿಖೆ ಕೈಗೊಂಡಿದೆ. ಈ ಮಧ್ಯೆ 200–2003ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ರೂ. 48.00 ಲಕ್ಷಗಳ ಆಡಳಿತಾತ್ಮಕ ಅನುಮೋದನೆ ನೀಡಿ ಮೊದಲನೇ ಕಂತಿನಲ್ಲಿ ರೂ. 24.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ವಿದ್ಯಾರ್ಥಿನಿಲಯದ ಶಿಥಿಲ ಮತ್ತು ಹಳೆ ಕಟ್ಟಡವನ್ನು ಕೆಡವುದರ ಬಗ್ಗೆ ಲೋಕಾಯುಕ್ತದವರಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್, ಮಂಗಳೂರು ಇವರು ವರದಿಸಿದ್ದಾರೆ.

ಪರಿಶಿಷ್ಟ ವರ್ಗಗಳ ಇಲಾಖೆ:

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ಮಂಗಳೂರಿನಲ್ಲಿ 2002–03ನೇ ಸಾಲಿನಿಂದ ಪ್ರಾರಂಭಿಸಲಾಗಿದ್ದು, ನಿವೇಶನ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಸೂಕ್ತ ನಿವೇಶನ ಪಡೆದು ಅನುದಾನ ಲಭ್ಯೆಯನ್ನು ಅನುಸರಿಸಿ ಕಟ್ಟಡ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ಹಿಂದುಳಿದ ವರ್ಗಗಳ ಇಲಾಖೆ:

ಮೆಟ್ರಿಕ್ – ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕೂಳೂರು ಮತ್ತು ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಬಿಜೈಗಳಲ್ಲಿ ಹಾಗೂ ಕೋಣಚೆಯಲ್ಲಿ ಸ್ನಾತಕೋತ್ತರ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಿಸಲು ಕ್ರಮ ಕೈಗೊಂಡಿದ್ದು ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ.

ಅಲ್ಪಸಂಖ್ಯಾತರ ಇಲಾಖೆ:

ಅಲ್ಪಸಂಖ್ಯಾತರ ಇಲಾಖಾವತಿಯಿಂದ 2002–03ನೇ ಸಾಲಿನಿಂದ 1 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಹಾಗೂ 1 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಚುನಾಯಿತ ಪ್ರತಿನಿಧಿಗಳಿಗೆ ಗೌರವಧನ ಹೆಚ್ಚಿಸುವ ಬಗ್ಗೆ

22 (189): ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ಚುನಾಯಿತ ಪ್ರತಿನಿಧಿಗಳಿಗೆ (ಜಿಲ್ಲಾ ಪಂಚಾಯತ್ ಸದಸ್ಯರು, ಗ್ರಾಮ ಸದಸ್ಯರು, ನಗರಾಸಭಾ ಸದಸ್ಯರು ಪುರಸಭಾಸದಸ್ಯರು) ಮಾಸಿಕ ಗೌರವಧನ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? ವಿವರ ನೀಡುವುದು:

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಅ) ಪಂಚಾಯತ್ ಸಂಸ್ಥೆಗಳ ಚುನಾಯಿತ ಸದಸ್ಯರ ಮಾಸಿಕ ಗೌರವಧನ ಹಾಗೂ ಸಭಾ ಉಪವೇಶನ ಶುಲ್ಕಗಳನ್ನು ಈಗಾಗಲೇ ಸರ್ಕಾರವು ಹೆಚ್ಚಿಸಿ ದಿನಾಂಕ 1-8-2003 ರಂದು ಆದೇಶ ಹೊರಡಿಸಿದೆ. ವಿವರ ಈ ಕೆಳಕಂಡಂತಿರುತ್ತದೆ.

ಪಂ.ರಾಜ್ ಸಂಸ್ಥೆಗಳು	ಸಿಟ್ಟಿಂಗ್ ಫೀ ರೂ.ಗಳಲ್ಲಿ	ಅಧ್ಯಕ್ಷ/ ಉಪಾಧ್ಯಕ್ಷರಿಗೆ ಗೌರವ ಧನ ರೂ ಗಳಲ್ಲಿ	ಸದಸ್ಯರ ಮಾಸಿಕ ಗೌರವ ಧನ
ಗ್ರಾಮ ಪಂಚಾಯತ್	100.00	500.00 ಮತ್ತು 300.00	–
ತಾಲ್ಲೂಕು ಪಂಚಾಯತಿ	150.00	2000.00 ಮತ್ತು 1300.00	700.00
ಜಿಲ್ಲಾ ಪಂಚಾಯತಿ	200.00	2750.00 ಮತ್ತು 2050.00	1200.00

ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ

ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದ್ದು, ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲದ ಮಿತಿಯಲ್ಲಿ ಗೌರವಧನ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ಮುಚ್ಚಲಾಗಿರುವ ಎನ್‌ಜಿಇಎಫ್ ಹಾಗೂ ಮೈಸೂರು ಲ್ಯಾಂಪ್ಸ್ ಕಾರ್ಖಾನೆಗಳ ಕಾರ್ಮಿಕರ ನಿವೃತ್ತಿ ವೇತನದ ಬಗ್ಗೆ

32 (548): ಶ್ರೀ ಸುರೇಶ್ ಕುಮಾರ್ ಎಸ್.ಎಂ.ಎಲ್.ಎ. (ರಾಜಾಜಿನಗರ) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎನ್‌ಜಿಇಎಫ್ ಹಾಗೂ ಮೈಸೂರು ಲ್ಯಾಂಪ್ಸ್ ಕಾರ್ಖಾನೆಗಳನ್ನು ಎಂದಿನಿಂದ ಮುಚ್ಚಲಾಗಿದೆ:

ಆ) ಈ ಕಾರ್ಖಾನೆಗಳಿಗೆ ಈಗಿರುವ ಅಧ್ಯಕ್ಷರುಗಳನ್ನು ಎಂದಿನಿಂದ ನೇಮಕ ಮಾಡಲಾಗಿದೆ:

ಇ) ಈ ಕಾರ್ಖಾನೆಗಳ ಕಾರ್ಮಿಕರುಗಳ ನಿವೃತ್ತಿ ವೇತನ ಮುಂತಾದ ಸಂಗತಿಗಳು ಇತ್ಯರ್ಥವಾಗಿದೆಯೇ? (ವಿವರಗಳನ್ನು ನೀಡುವುದು)